ಹಚ್ಚುವ ಯೋಚನೆಯೂ ನಡೆಯಿತು. ಅಷ್ಟರಲ್ಲಿ ದೊಡ್ಡದೊಂದು ಟ್ರಂಕ್ ಹೊತ್ತುಕೊಂಡು ಮುನಿಯಪ್ಪ ಬಂದರು. ನಮ್ಮ ನೆರವಿನಿಂದ ಮಗನ ಶವವನ್ನು ಅದರಲ್ಲಿಟ್ಟುಕೊಂಡರು. ಶವವನ್ನು ಹಾಗೆ ಕಷ್ಟಪಟ್ಟು ಟ್ರಂಕಿನಲ್ಲಿ ಇರಿಸುವುದನ್ನು ಕಂಡು ನಾನು ದಂಗಾದೆ. 'ಯಾಕೆ ಹೀಗೆ ಮಾಡುತ್ತಿದ್ದೀರಿ?' ಎಂದು ಕೇಳಿದೆ. ಆಗ ಸಿಕ್ಕ ಉತ್ತರ ಇನ್ನೂ ದಂಗುಬಡಿಸಿತು.

ಮಗನನ್ನು ಕೊಪ್ಪಳದ ತಮ್ಮ ಜಾಗದಲ್ಲೇ ಮಣ್ಣು ಮಾಡುವುದು ಮುನಿಯಪ್ಪನವರ ಬಯಕೆಯಾಗಿತ್ತು. ಅದಕ್ಕಾಗಿ ಟ್ಯಾಕ್ಸಿ ವಿಚಾರಿಸಿದ್ದಾರೆ. ಟ್ಯಾಕ್ಸಿಯವರು ನಾಲ್ಕು ಸಾವಿರ ರೂಪಾಯಿ ಕೇಳಿದರಂತೆ. ಅವರು ತಮ್ಮ ಕೆಲವೇ ಗುಂಟೆಗಳ ಜಮೀನು ಮಾರಿದಾಗ ಬಂದ ಹಣ ಕೂಡ ಅಷ್ಟಿರಲಿಲ್ಲವಂತೆ. ಟ್ಯಾಕ್ಸಿಗೆ ಹಣ ಹೊಂದಿಸಲಾಗದೆ, ನಾಲ್ಕುನೂರು ರೂಪಾಯಿ ಕೊಟ್ಟು ಟ್ರಂಕು ಖರೀದಿಸಿ ತಂದಿದ್ದರು. ಅದರಲ್ಲಿ ಮಗನ ಶವವನ್ನು ಊರಿಗೆ ಸಾಗಿಸುವುದು ಅವರ ಉದ್ದೇಶವಾಗಿತ್ತು.

ಟ್ರಂಕನ್ನು ತಲೆಯ ಮೇಲೆ ಇಡುವಂತೆ ಕೇಳಿದ ಮುನಿಯಪ್ಪನವರು ಅದನ್ನು ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡಿನವರೆಗೆ ಹೊತ್ತುಕೊಂಡೇ ಹೋದರು. ಅಲ್ಲಿಂದ ಬಸ್ಸಿನಲ್ಲಿ ಕೊಪ್ಪಳಕ್ಕೆ.

ಈ ಅಪ್ಪ–ಮಗ ನಾನು ಕಂಡ ಅದ್ಭುತ ವ್ಯಕ್ತಿತ್ವಗಳು. ಅವರನ್ನು ಮರೆಯಲು ಸಾಧ್ಯವೇ ಇಲ್ಲ. ಅಂಥವರ ಪಾಲಿಗೆ ಬದುಕಿಗಿಂತ ಸಾವೇ ದುಬಾರಿ. ಬಡವರಾದರೂ ಮುನಿಯಪ್ಪ ದುಃಖಿಸಲಿಲ್ಲ. ದೃಢ ಸಂಕಲ್ಪ ಮಾಡಿ ತಮ್ಮೂರಿಗೆ ಮಗನ ಶವ ಸಾಗಿಸಿ, ಅಂತಿಮಸಂಸ್ಕಾರ ಮಾಡಿದರು.

ಅನೇಕ ದಿನಗಳಾದರೂ ಮುನಿಯಪ್ಪ ಟ್ರಂಕ್ ಎತ್ತಿಕೊಂಡು ಹೋದ ಚಿತ್ರ ನನ್ನ ಮನಸ್ಸನ್ನು ಕಾಡುತ್ತಲೇ ಇದೆ".

ಆಶಾ ಬೆನಕಪ್ಪನವರನ್ನು ಮಾತ್ರವೇನು, ಮುನಿಯಪ್ಪನ ಕಥೆಯನ್ನು ಅರಿತ ಯಾರನ್ನಾದರೂ ಕಾಡುವಷ್ಟು ಆ ಘಟನೆ ತೀವ್ರವಾಗಿದೆ. ಮುನಿಯಪ್ಪನ ಮಗನ ಸಂಸ್ಕಾರಕ್ಕೆ ಒದಗಿಬರುವ ಟ್ರಂಕು ಒಂದು ಬಡ ಕುಟುಂಬದ ಘನತೆಯ ರೂಪಕವೇ ಸರಿ. ಆಧುನಿಕ ಹೆಣದ ಪೆಟ್ಟಿಗೆಗಳು ಕೂಡ ಟ್ರಂಕುಗಳೇ ಆದರೂ ಮುನಿಯಪ್ಪನ ಟ್ರಂಕು ಜನಸಾಮಾನ್ಯರ ಪಾಲಿಗೂ ಸುಲಭವಾಗಿ ಎಟುಕುವಂತಹದ್ದು.

ಆಶಾ ಬೆನಕಪ್ಪನವರು ದಾಖಲಿಸಿದ ಅನುಭವ ಕಥನದ ಪ್ರೇರಣೆಯಲ್ಲಿ ಮಂಸೋರೆ (ಮಂಜುನಾಥ ಸೋಮಕೇಶವ ರೆಡ್ಡಿ) 'ಹರಿವು' ಸಿನಿಮಾ ರೂಪಿಸಿದ್ದಾರೆ. ಮುನಿಯಪ್ಪನ ಪಾತ್ರದಲ್ಲಿನ ಸಂಚಾರಿ ವಿಜಯ್ ನಟಿಸಿರುವ ಈ ಚಿತ್ರ, ಅತ್ಯುತ್ತಮ ಪ್ರಾದೇಶಿಕ ಚಿತ್ರ ರಾಷ್ಟ್ರಪ್ರಶಸ್ತಿಯನ್ನೂ ಅತ್ಯುತ್ತಮ ಚಿತ್ರ ರಾಜ್ಯಪ್ರಶಸ್ತಿಯನ್ನೂ ಪಡೆದಿದೆ. ಈ ಪ್ರಶಸ್ತಿಗಳನ್ನು ಕೂಡ ನಿರ್ಮಾಪಕ–ನಿರ್ದೇಶಕರು ಒಂದು ಟ್ರಂಕಿನಲ್ಲಿ ಇಟ್ಟುಕೊಂಡಿರಬಹುದೇ?

ಟ್ರಂಕಿನೊಳಗೆ ಇರಬಹುದಾದ ವಸ್ತು ವೈವಿಧ್ಯದಂತೆ, 'ಟ್ರಂಕು' ಎನ್ನುವ ಶಬ್ದಕ್ಕಿರುವ ಅರ್ಥಗಳೂ ಹಲವು. ಉಕ್ಕಿನ ತಗಡುಗಳಿಂದ ಮಾಡಿದ, ಹಿಡಿಕೆ ಮತ್ತು ಮುಚ್ಚಳ ಇರುವ ಪೆಟ್ಟಿಗೆ ಎನ್ನುವುದು ಸಾಮಾನ್ಯ ಅರ್ಥ. ಮೈಸೂರು ವಿಶ್ವವಿದ್ಯಾಲಯದ ನಿಘಂಟು ಬಿಡಿಸಿದರೆ ಅರಳಿಕೊಳ್ಳುವ ಟ್ರಂಕಿನ ನಾನಾರ್ಥಗಳು ದಂಗುಬಡಿಸುವಂತಿವೆ. 1. ತಾಳು, ಕಾಂಡ, 2. ಮುಂಡ, ಅಟ್ಟೆ, ಕಬಂಧ, 3. ಪ್ರಧಾನ ಭಾಗ, 4. ಅಪಧಮನಿ, ನರ, 5. ಸಾಮಾನು, ಬಟ್ಟೆಬರೆ ಮೊದಲಾದವುಗಳನ್ನು ಸಾಗಿಸಲು ಬಳಸುವ, ಕೀಲುಮುಚ್ಚಳವುಳ್ಳ ದೊಡ್ಡ ಪೆಟ್ಟಿಗೆ, ಪೆಠಾರಿ, ಸಂದೂಕ, 6. ಮೋಟಾರು ಕಾರಿನ ಹಿಂಭಾಗ – ಡಿಕ್ಕಿ, 7. ಆನೆಯ ಸೊಂಡಿಲು, 8. ಸುರಂಗ ಕೊಳವೆ, 9. ಈಜು, ಮುಷ್ಟಿಯುದ್ಧ, ಮೊದಲಾದವುಗಳಲ್ಲಿ ಬಳಸುವ ಗಂಡಸರ ಬಿಗಿ ಚಡ್ಡಿ ಯಾ